# ಅಡಿಕ್ಷನ್‌ಗಳ ಸ್ವರ್ಣಯುಗ!

ಬಸ್, ಟ್ರೈನ್, ಮೆಟ್ರೊದಲ್ಲಿದ್ದಾಗ ಸುತ್ತಲೂ ಒಮ್ಮೆ ನೋಡಿ, ಎಲ್ಲರೂ ಅವರವರ ಮೊಬೈಲ್ ಫೋನ್‌ಗಳಲ್ಲೇ ಮುಳುಗಿಬಿಟ್ಟಿರುತ್ತಾರೆ. ಅಲ್ಲಿಂದ ಮನೆಗೆ ಬನ್ನಿ, ಮನೆ ಮಂದಿಯ ಕಣ್ಣುಗಳು ಫೋನ್, ಟಿ.ವಿ. ಪರದೆಯ ಮೇಲೆ ನೆಟ್ಟಿರುತ್ತವೆ. ಸಭೆ–ಶುಭ ಸಮಾರಂಭಗಳಲ್ಲಿ, ಸ್ನೇಹವಲಯದಲ್ಲೂ ಇದೇ ಪರಿಸ್ಥಿತಿ. ಒಂದೈದು ನಿಮಿಷ ಬಿಡುವು ಸಿಕ್ಕರೂ ತಟ್ಟನೆ ಫೋನ್‌ಗಳ ಮೇಲೆ ರಂಗೋಲಿ ಬಿಡಿಸಲು ಸಜ್ಜಾಗುತ್ತೇವೆ. ವ್ಯಸನವಾಗಿರುವ ಈ ನಡವಳಿಕೆಯ ದುಷ್ಪರಿಣಾಮಗಳೇನು, ಕಡಿವಾಣ ಹಾಕುವುದು ಹೇಗೆ ಮತ್ತು ಆದರಿಂದ ದೂರವಿರುವುದು ಹೇಗೆ ಎನ್ನುವುದರ ಮೇಲೆ ಬೆಳಕು ಚೆಲ್ಲುವ ಈ ಲೇಖನ ಮೊಬೈಲ್ ವ್ಯಸನಿಗಳಿಗೆ ಎಚ್ಚರಿಕೆಯ ಪಾಠದಂತೆಯೂ ಇದೆ.

■ ಪ್ರಕಾಶ್ ರಾವಂದೂರ್

